ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ. ಈ ರೀತಿ ಹೆಚ್ಚು ಮಾಡಿಕೊಳ್ಳುತ್ತಾ ಹೋಗಿ ಮುರ್ನಾಲ್ಕು ವರ್ಷದಲ್ಲಿ ಎಲ್ಲಾ ಕುಟುಂಬಗಳಿಗೆ ಸಾಲ ಕೊಡಬೇಕೆಂದು ನಾವು ತೀರ್ಮಾನ ಮಾಡಿದ್ದೇವೆ.

ಶ್ರೀ ಡಿ.ಆರ್. ಪಾಟೀಲ್ : ಅದೇರೀತಿ ಮೆಂಬರ್‌ಶಿಪ್‌ಗೂ ಸಹಿತ ಅರ್ಜಿ ಕೊಟ್ಟರೆ ಆಗ ಬೇಕೆನ್ನುವುದು ಇದೆ. ಅರ್ಜಿ ಕೊಡಲಿಕ್ಕೆ ತೆಗೆಯಲಿಕ್ಕೆ ಅಲ್ಲಿ ಸ್ವಲ್ಪ ತೊಂದರೆಯಿದೆ. ಆ ರೀತಿಯ ಒಂದು ಕಲ್ಪನೆಯಿದೆ. ಅದಕ್ಕೆ ಮೆಂಬರ್‌ಶಿಪ್ ಹೆಚ್ಚು ಆಗುವಹಾಗೆ ಎಲ್ಲಾ ಜನಾಂಗದವರು ಕವರ್ ಆಗುವ ಹಾಗೆ ನೋಡುತ್ತೀರಾ? 1995-96ರಲ್ಲಿ 11.33 ಪರ್ಸೆಂಟ್ ಇತ್ತು. ಅದನ್ನು ತಾವು ಈಗ 14.91ಕ್ಕೆ ತಂದಿದ್ದೀರಿ. ಏರಿಕೆಯಲ್ಲಿ ಎಷ್ಟು ಏರಿಕೆ ಆಗಬೇಕಾಗಿತ್ತು ಅಷ್ಟು ಏರಿಕೆ ಆಗಿಲ್ಲ. ಅದಕ್ಕೆ ದಯವಿಟ್ಟು ವಿಶ್ವಾಸದಿಂದ ಒತ್ತು ಕೊಟ್ಟು ನೀವು ಎಲ್ಲಾ ಜನಾಂಗದವರಿಗೆ ಅಲ್ಲಿ ಸದಸ್ಯರಾಗುವಂತೆ ಮಾಡಿ ಹೊಸಬರಿಗೆ ಆದ್ಯತೆಯ ಮೇರೆಗೆ ಸಾಲ ಸಿಗುವಂತಹ ವ್ಯವಸ್ಥೆಯನ್ನೂ ಕೂಡ ತಾವು ಮಾಡಬೇಕು.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ನಾವು ಈಗಾಗಲೇ ಎಲ್ಲಾ ಸದಸ್ಯರಿಗೂ ಮೆಂಬರ್‌ಶಿಪ್ ಸಿಗಬೇಕು, ಎಲ್ಲರಿಗೂ ಸಾಲ ಸಿಗಬೇಕೆನ್ನುವ ವ್ಯವಸ್ಥೆಯನ್ನೂ ಕೂಡ ಮಾಡಿದ್ದೇವೆ. ನಬಾರ್ಡ್‌ನವರು ನಮ್ಮ ಬೇಡಿಕೆ ಎಷ್ಟಿದೆ ಅಷ್ಟು ಕೊಡುತ್ತಿಲ್ಲ. ನಬಾರ್ಡ್‌ನವರ ಜೊತೆಯಲ್ಲಿ ಮಾತನಾಡಿ ಅವರು ಸಾಲ ಕೊಡಲಿಕ್ಕೆ ಒಪ್ಪುವಂತೆ ಪ್ರಯತ್ನ ಮಾಡಿ ಕೃಷಿ ಕುಟುಂಬದವರಿಗೆ ಎಲ್ಲರಿಗೂ ಸಾಲ ಒದಗಿಸುವ ಪ್ರಯತ್ನ ಮಾಡುತ್ತೇವೆ.

ಶ್ರೀ ಡಿ.ಆರ್. ಪಾಟೀಲ್ : ದೀರ್ಘಾವಧಿ ಸಾಲದೊಳಗೆ ಮೊದಲಿನ ಕವರೇಜ್ ಒಂದು ಪರ್ಸೆಂಟ್ ಇದೆ. 1995-96ರಲ್ಲಿ ಅದು ಪಾಯಿಂಟ್ 64 ಪರ್ಸೆಂಟ್ ಇದೆ. ಅದಕ್ಕೆ ಬಹಳಷ್ಟು ಮಂದಿ ಬೇರೆ ಬೇರೆ ಮೂಲಗಳಿಂದ ಸಾಲ ತರುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಅದನ್ನೂ ಸಹಿತ ಇದೇ ಪ್ರಮಾಣದಲ್ಲಿ ಹೆಚ್ಚು ಆಗುವಹಾಗೆ ವ್ಯವಸ್ಥೆ ಮಾಡಬೇಕೆಂದು ಕೇಳುತ್ತೇನೆ.

ಶ್ರೀ ಎಸ್.ಎಸ್.ಪಾಟೀಲ್ : ಮಾನ್ಯ ಅಧ್ಯಕ್ಷರೆ, ದೀರ್ಘಾವಧಿ ಸಾಲದಲ್ಲಿ ಮಾನ್ಯ ಸದಸ್ಯರು ಹೇಳಿದ ಹಾಗೆ ಸಾಲ ಕೊಡುವುದು ಕಡಿಮೆಯಾಗಿರುವುದು ಸತ್ಯದ ಮಾತು. ಲ್ಯಾಂಡ್ ಬ್ಯಾಂಕ್‌ನವರು ಅಷ್ಟು ಚೆನ್ನಾಗಿ ಕೆಲಸ ಮಾಡದಿರುವುದರಿಂದ ಈ ರೀತಿಯಾಗಿದೆ. ಈಗಾಗಲೇ ಪ್ರಾಥಮಿಕ ಸಂಘಗಳ ಮುಖಾಂತರ ಮತ್ತು ಡಿಸಿಸಿ ಬ್ಯಾಂಕುಗಳ ಮುಖಾಂತರ ದೀರ್ಘಾವಧಿ ಸಾಲ ಕೊಡುವ ವ್ಯವಸ್ಥೆ ಮಾಡಿದ್ದೇವೆ. ಒಟ್ಟಿನಲ್ಲಿ ಎಲ್ಲಾ ರೈತರಿಗೂ ದೀರ್ಘಾವಧಿ ಸಾಲ ಸಿಗುವ ವ್ಯವಸ್ಥೆಯನ್ನೂ ಕೂಡ ನಾವು ಮಾಡುತ್ತೇವೆ.

ಧಾರವಾಡ ಹಾಗೂ ಹುಬ್ಬಳ್ಳಿ ಕೃಷಿ ಹುಟ್ಟುವಳಿ ಮಾರುಕಟ್ಟೆಗಳಲ್ಲಿ ಶೀತಾಗಾರ ವ್ಯವಸ್ಥೆ

262 - ಶ್ರೀ ಚಂದ್ರಕಾಂತ್ ಬೆಲ್ಲದ (ಧಾರವಾಡ) : ಮಾನ್ಯ ಕೃಷಿ ಮಾರುಕಟ್ಟೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಧಾರವಾಡ ಹಾಗೂ ಹುಬ್ಬಳ್ಳಿ ಕೃಷಿ ಹುಟ್ಟುವಳಿ ಮಾರುಕಟ್ಟೆಗಳಲ್ಲಿ ಶೀತಾಗಾರ (ಕೋಲ್ಡ್*

ಸ್ಟೋರೇಜ್) ಎರಡು ಕಡೆಯಲ್ಲಿ ಕಟ್ಟಿಸುವ ಯೋಜನೆ ಯಾವ ಹಂತದಲ್ಲಿದೆ? (ಆದರ ಪೂರ್ಣ ವಿವರ ನೀಡುವುದು)

ಆ) ಹುಬ್ಬಳ್ಳಿಯ ತೋಟಗಾರಿಕೆ ಬೆಳೆಗಳ ಸಂಸ್ಕರಣ ಹಾಗೂ ರಫ್ತು ಸಹಕಾರಿ ಸಂಘ(ನಿ) ಇವರಿಗೆ ಈವರೆಗೆ ಕೊಟ್ಟಿರುವ ಹಣದ ಪೂರ್ಣ ಮಾಹಿತಿ ನೀಡುವುದು. ಯಾವ ಯಾವ ಯೋಜನೆಯಿಂದ ಸಹಾಯ ಧನ ನೀಡಿದ್ದೀರಿ?

ಇ) ಮೇಲಿನ ತೋಟಗಾರಿಕೆ ಸಹಕಾರ ಸಂಘ ಪ್ರಾರಂಭಿಸಿರುವ ವರ್ಷ ಯಾವುದು ಇಲ್ಲಿಯವರೆಗಿನ ಸಂಘದ ಸದಸ್ಯರ ಸಂಖ್ಯೆ ಎಷ್ಟು? (ವಿವರ ನೀಡುವುದು)

ಈ) ಮೇಲಿನ ತೋಟಗಾರಿಕೆ ಸಹಕಾರಿ ಸಂಘ ತೋಟಗಾರಿಕೆಯ ಬೆಳೆಯುವ ಎಷ್ಟು ರೈತರಿಂದ ಫಸಲು ಪಡೆದಿರುವುದು ಹಾಗೂ ಎಷ್ಟು ಮಾರಾಟ ರಫ್ತು ಮತ್ತು ಸಂಸ್ಕರಣ ಮಾಡಿರುವರು ಈವರೆಗಿನ ಪೂರ್ಣ ಖರೀದಿ-ವಿಲೆಯ ಮಾಹಿತಿ ನೀಡುವುದು?

ಶ್ರೀ ಹೆಚ್. ನಾಗಪ್ಪ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು) :

ಅ) ಧಾರವಾಡ ಮತ್ತು ಹುಬ್ಬಳ್ಳಿ ಕೃಷಿ ಹುಟ್ಟುವಳಿಗಳ ಮಾರುಕಟ್ಟೆಗಳಲ್ಲಿ ಶೀತಾಗಾರವನ್ನು (ಕೋಲ್ಡ್ ಸ್ಟೋರೇಜ್) ಮಾರುಕಟ್ಟೆ ಸಮಿತಿಗಳಿಂದ ನಿರ್ಮಿಸುವ ಯಾವ ಯೋಜನೆಯೂ ಇರುವುದಿಲ್ಲ. ಆದರೆ ಧಾರವಾಡದಲ್ಲಿ ತೋಟಗಾರಿಕಾ ಇಲಾಖೆಯಿಂದ ನಿರ್ಮಿಸುವ ಯೋಜನೆ ಇರುತ್ತದೆ.

ಆ) ಹುಬ್ಬಳ್ಳಿಯ ಕರ್ನಾಟಕದ ತೋಟಗಾರಿಕಾ ಉತ್ಪಾದಕರ ಸಹಕಾರ ಮಾರಾಟ ಮತ್ತು ರಫ್ತು ಸಂಘ ನಿಯಮಿತ ಇವರು ರಾಜ್ಯ ಸರ್ಕಾರದಿಂದ ಈವರೆಗೆ ಯಾವುದೇ ಸಹಾಯಧನ ಪಡೆದಿರುವುದಿಲ್ಲ. ಆದರೆ ಬ್ಯಾಂಕುಗಳು, ಮಾರುಕಟ್ಟೆ ಸಮಿತಿಗಳು ಇವುಗಳಿಂದ ರೂ.55,44,000.00 ಸಾಲವನ್ನು ಮತ್ತು ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿಯಿಂದ ಹಾಗೂ 9 ಮಾರುಕಟ್ಟೆ ಸಮಿತಿಗಳಿಂದ ಒಟ್ಟು 74,000,000 ಷೇರು ಬಂಡವಾಳವನ್ನು ಸದರಿ ಸಂಸ್ಥೆಯು ಪಡೆದಿರುತ್ತದೆ. ಅಲ್ಲದೆ ವಸ್ತು ಮತ್ತು ಆಸ್ತಿ ರೂಪದಲ್ಲಿ ರೂ. 12,23,000-00 ಮೌಲ್ಯದ ರಿಯಾಯಿತಿ ಸೌಲಭ್ಯ ಪಡೆದಿದೆ.

ಇ) ಸಹಕಾರ ಸಂಘವು 1994ರಲ್ಲಿ ಪ್ರಾರಂಭವಾಗಿದೆ. ಇಲ್ಲಿಯವರೆಗೆ ಸಂಘದ ಸದಸ್ಯರ ಸಂಖ್ಯೆ 301 ಇರುತ್ತದೆ. ವಿವರಗಳನ್ನು ಅನುಬಂಧ-1ರಲ್ಲಿ ನೀಡಿದೆ.

ಈ) ತೋಟಗಾರಿಕಾ ಸಹಕಾರಿ ಸಂಘವು 292 ಸದಸ್ಯರಿಂದ ಹಾಗೂ 800 ನಾಮಮಾತ್ರದ (ನಾಮಿನಲ್) ಸದಸ್ಯರಿಂದ ಉತ್ಪನ್ನಗಳನ್ನು ಖರೀದಿ ಮಾಡುತ್ತಿದೆ. ಈ ಸಂಘದಿಂದ ನಡೆಸಿದ ವಾರ್ಷಿಕ ಖರೀದಿ ಹಾಗೂ ವಿಕ್ರಿಯೆ ಹಿಂದಿನ 3 ವರ್ಷದ ವಿವರಗಳನ್ನು ಅನುಬಂಧದಲ್ಲಿ ನೀಡಿದೆ. ಸದರಿ ಸಂಸ್ಥೆಯು ಇದುವರೆಗೆ ಯಾವುದೇ ಸಂಸ್ಕರಣೆ ಮತ್ತು ರಫ್ತು ಮಾಡಿರುವುದಿಲ್ಲ.

ಅನುಬಂಧ - I

ಕರ್ನಾಟಕ ತೋಟಗಾರಿಕಾ ಉತ್ಪಾದಕರ ಸಹಕಾರಿ ಮಾರಾಟ ಮತ್ತು ರಫ್ತು ಸಂಘ, ಹುಬ್ಬಳ್ಳಿ ಇವರು ಹೊಂದಿರುವ ಸದಸ್ಯರ ವಿವರ

	'ಅ' ವರ್ಗ	'ಬಿ' ವರ್ಗ	'ಕ' ವರ್ಗ	ಒಟ್ಟು
1994-95	244	-	2	246
1995-96	282	1	2	285
1996-97	282	1	6	289
1997-98	287	1	8	296
1998-99	292	1	8	301

ಅನುಬಂಧ - II

ಕರ್ನಾಟಕ ತೋಟಗಾರಿಕಾ ಉತ್ಪಾದಕರ ಸಹಕಾರಿ ಮಾರಾಟ ಮತ್ತು ರಫ್ತು ಸಂಘ, ಹುಬ್ಬಳ್ಳಿ ಇವರ ವಾರ್ಷಿಕ ಖರೀದಿ ಹಾಗೂ ಮಾರಾಟದ ವಿವರ

(ರೂ. ಲಕ್ಷಗಳಲ್ಲಿ)

ವರ್ಷ	ಖರೀದಿ	ವಿಕ್ರಿ
1995-96	50,32,393.00	51,64,827.00
1996-97	72,11,529.00	74,11,783.00
1997-98	68,15,901.00	67,38,056.00

10.40 ಎ.ಎಂ

ಶ್ರೀ ಜಿ. ಚಂದ್ರಕಾಂತ ಬೆಲ್ಲದ್ : ಅಧ್ಯಕ್ಷರೇ, ಈ ಧಾರವಾಡದ ಹುಬ್ಬಳ್ಳಿ ಮಾರುಕಟ್ಟೆಯಲ್ಲಿ ಕೋಲ್ಡ್ ಸ್ಟೋರೇಜ್ ಬೇಕು ಎಂದು ಕೇಳಿದ್ದೇವೆ. ಆದರೆ ತೋಟಗಾರಿಕೆ ಇಲಾಖೆ, ಧಾರವಾಡದವರು ಹತ್ತು ವರ್ಷಗಳಿಂದ ಕೋಲ್ಡ್ ಸ್ಟೋರೇಜ್ ಮಾಡುತ್ತೇವೆ ಎಂದು ಹೇಳುತ್ತಿದ್ದಾರೆ, ಇನ್ನುವರೆಗೂ ಅದು ಆಗಿಲ್ಲ. ಅದಕ್ಕೆ ಕಾರಣ ಏನು? ಎಂದು ಮಾನ್ಯ ಸಹಕಾರ ಮಂತ್ರಿಗಳು ಉತ್ತರ ಕೊಡಬೇಕು. ಕೇವಲ ಅವರ ಹೆಸರಿನ ಮೇಲೆ ತೋಟಗಾರಿಕೆ ಇಲಾಖೆ, ಧಾರವಾಡದವರು ಮಾಡುತ್ತೇವೆ ಎಂದು ಹೇಳಿ ಎಂಟು ವರ್ಷಗಳಿಂದ ಕಾಯುತ್ತಿದ್ದಾರೆ. ಈಗಾಗಲೇ ಹತ್ತು ವರ್ಷ ಆಗಿದೆ. ಎರಡನೇಯದು, ಈ ಒಂದು ತೋಟಗಾರಿಕಾ ಮತ್ತು ಉತ್ಪಾದಕರ ಸಹಕಾರ ಮಾರಾಟ ಮತ್ತು ರಫ್ತುಸಂಘ - ಈ ಸಂಸ್ಥೆ ಪ್ರಾರಂಭವಾಗಿ ಇಷ್ಟು ದಿವಸ ಆದರೂ ಸಾಮಾನ್ಯವಾಗಿ ತೋಟಗಾರಿಕೆಯಲ್ಲಿರುವಂಥ ಜನರನ್ನು ಸದಸ್ಯತ್ವ ಮಾಡಿಕೊಂಡಿಲ್ಲ. ಮತ್ತೆ ಇದು ಯಾರ ಸಲುವಾಗಿ ಇರುವುದು? ಯಾರು ಕೃಷಿ ಉತ್ಪನ್ನ ಮಾಡುತ್ತಿದ್ದಾರೋ ಅಥವಾ ತೋಟಗಾರಿಕೆ ಉತ್ಪನ್ನ ಮಾಡುತ್ತಿದ್ದಾರೋ, ಮುಖ್ಯವಾಗಿ ತೋಟಗಾರಿಕಾ ಉತ್ಪನ್ನ ಮಾಡುತ್ತಾ, ಇರುವಂಥ ಜನರನ್ನು ಇನ್ನೂ ಸದಸ್ಯರನ್ನಾಗಿ ಮಾಡಿಕೊಂಡಿಲ್ಲ. ಮತ್ತೆ ಇದು ಯಾರ ಸಲುವಾಗಿ ಇರುವುದು? ಯಾರು ಕೃಷಿ ಉತ್ಪನ್ನ ಮಾಡುತ್ತಿದ್ದಾರೋ, ಅವರು ಹೆಚ್ಚಿನ ಸಂಖ್ಯೆಯಲ್ಲಿ ಇಲ್ಲಿ ಸದಸ್ಯತ್ವ ಪಡೆದಿಲ್ಲ. ಇದಕ್ಕೆ ಕಾರಣವೇನು? ಮತ್ತೆ ಹೆಚ್ಚಿಗೆ ತೋಟಗಾರಿಕಾ ಉತ್ಪಾದಕರನ್ನು ಸದಸ್ಯರನ್ನಾಗಿ ಮಾಡುವಂತೆ ಏನು ಕ್ರಮ ತೆಗೆದುಕೊಳ್ಳುತ್ತೀರಿ? ಮತ್ತೊಂದು, ಈಗಾಗಲೇ ಒಂಭತ್ತು ಮಾರುಕಟ್ಟೆಯಿಂದ ಇಷ್ಟೊಂದು ಹಣ ಕೊಟ್ಟಿದ್ದೀರಿ. ಈಗಾಗಲೇ ನಾಲ್ಕು ವರ್ಷಗಳಾಯಿತು. ಎಷ್ಟು ತೋಟಗಾರಿಕಾ ಉತ್ಪನ್ನಗಳನ್ನು ಇಲ್ಲಿಯವರೆಗೆ ಖರೀದಿ ಮಾಡಿದೆ ಮತ್ತು ರಫ್ತು ಮಾಡಿದೆ? ಎಷ್ಟು ಇದರಿಂದ ತೋಟಗಾರಿಕಾ ಬೆಳೆಗಳನ್ನು ಬೆಳೆದ ರೈತರಿಗೆ ಉಪಯೋಗವಾಗುತ್ತಿದೆ? ಇದರ ಬಗ್ಗೆ ನನಗೆ ತಿಳಿಸಬೇಕು. ಮತ್ತೆ ಎರಡು ಕಡೆಗೆ ಕೋಲ್ಡ್ ಸ್ಟೋರೇಜ್ ಆಗಬೇಕು ಎಂದು ಹೇಳಿ ಸರ್ಕಾರದ ಮೇಲೆ ಒತ್ತಾಯ ಮಾಡುತ್ತಿದ್ದೇವೆ. ತೋಟಗಾರಿಕಾ ಬೆಳೆಗಳನ್ನು ಬೆಳೆಯುತ್ತಾ ಇರುವಂಥ, ಉತ್ತರ ಕರ್ನಾಟಕದ ಪ್ರಮುಖವಾದಂಥ ತೋಟಗಾರಿಕೆ ಮಾರುಕಟ್ಟೆ - ಜಗಜ್ಯೋತಿ ಬಸವೇಶ್ವರ ಮಾರುಕಟ್ಟೆ - ಇಲ್ಲಿ ಶೈತ್ಯಾಗಾರ ತೋಟಗಾರಿಕಾ ಬೆಳೆಗಳ ಸಲುವಾಗಿ ಬೇಕಾಗಿದೆ. ಇದರ ಬಗ್ಗೆ ತೀವ್ರವಾಗಿ ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆ ಎಂದು ಉತ್ತರವನ್ನು ಕೊಡಬೇಕೆಂದು ಕೇಳುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್ (ಕೃಷಿ ಮಾರುಕಟ್ಟೆ ಸಚಿವರ ಪರವಾಗಿ) (ಸಹಕಾರ ಮಂತ್ರಿ) : ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಕೇಳಿದಹಾಗೆ ಈಗಾಗಲೇ ನಾವು ನಮ್ಮ ಸಹಕಾರ ತೋಟಗಾರಿಕೆ ಮಹಾಮಂಡಲವನ್ನು ಮೊನ್ನೆ ಉದ್ಘಾಟನೆ ಮಾಡಿದ್ದೇವೆ. ಈ ಮಹಾಮಂಡಲದ ಮುಖಾಂತರ ನಾವು ಪ್ರತಿ ಜಿಲ್ಲೆಗೆ ಒಂದು ಜಿಲ್ಲಾ ಮಹಾಮಂಡಲವನ್ನು ಮಾಡುವುದರ ಮೂಲಕ ಆ ಒಂದು ಶೈತ್ಯಾಗಾರ ತರುವಂಥ ಪ್ರಯತ್ನವನ್ನು ಮಾಡುತ್ತೇವೆ. ಹುಬ್ಬಳ್ಳಿಯಲ್ಲಿ ಒಂದು ಶೈತ್ಯಾಗಾರ ಕಟ್ಟುವುದು ಬಹಳ ಅವಶ್ಯಕತೆ ಇದೆ. ಅದನ್ನೂ ಕೂಡ ನಾವು ಕಟ್ಟುವಂಥ ವ್ಯವಸ್ಥೆಯನ್ನು ಮುಂದಿನ ನಮ್ಮ ಯೋಜನೆಯಲ್ಲಿ ಈಗಾಗಲೇ ಹಾಕಿಕೊಂಡಿದ್ದೇವೆ. ಇನ್ನು ಈ ಒಂದು ತೋಟಗಾರಿಕಾ ಬೆಳೆಗಾರ ಸಂಘಕ್ಕೆ ಎಲ್ಲಾ ತೋಟ

ಬೆಳಿಗಾರರನ್ನು ಮೆಂಬರ್ ಮಾಡಿಕೊಂಡಿಲ್ಲ ಎನ್ನುವ ಮಾತನ್ನು ಅವರು ಹೇಳಿದ್ದಾರೆ. ತಾವು ದಯವಿಟ್ಟು ಅವರೆಲ್ಲರಿಗೂ ಅರ್ಜಿ ಕೊಡುವುದಕ್ಕೆ ಹೇಳಿ. ಯಾರದ್ದಾದರೂ ರಿಜೆಕ್ಟ್ ಮಾಡಿದ್ದಾರೆ ಎಂದು ನನ್ನ ನಜರಿಗೆ ತಂದರೆ ಖಂಡಿತವಾಗಿ ಎಲ್ಲಾ ತೋಟಗಾರಿಕಾ ಬೆಳಿಗಾರರನ್ನು ಮೆಂಬರ್ ಮಾಡುವಂಥ ವ್ಯವಸ್ಥೆ ಮಾಡುತ್ತೇನೆ.

ಶ್ರೀ ಜಿ. ಚಂದ್ರಕಾಂತ ಬೆಲ್ಲದ್ : ಈಗ ತೋಟಗಾರಿಕೆ ಬೆಳಿಗಾರರು ಬಹಳಷ್ಟು ಜನ ಇದ್ದಾರೆ. ತೋಟಗಾರಿಕಾ ಬೆಳಿಗಾರರನ್ನು ಮೆಂಬರ್‌ಶಿಪ್ ಮಾಡುವುದಕ್ಕೆ ಪ್ರಯತ್ನ ಮಾಡಿ. ಆ ಬೆಳೆಗಳನ್ನು ಬೆಳೆಯುವ ಆ ರೈತರಿಗೆ ಇನ್ನೂ ತೀವ್ರವಾಗಿ ಸಹಾಯ ಮಾಡುವಂಥ ಒಂದು ಸಂಸ್ಥೆ ಆದಾಗಬೇಕಾಗಿದೆ. ಆ ದೃಷ್ಟಿಯಿಂದ ಮೆಂಬರ್‌ಶಿಪ್ ಕಡ್ಡಾಯ ಮಾಡಬೇಕು ಎಂದು ಹೇಳಬೇಕು. ಈಗ ನೋಡಿ, ಅವರು ಪಡೆದಂಥ ತೋಟಗಾರಿಕಾ ಉತ್ಪನ್ನಗಳನ್ನು ಬೇರೆ ಸಾಮಾನ್ಯ ಸದಸ್ಯರಿಂದ ಪಡೆದಿದ್ದಾರೆಯೇ ಹೊರತು ಅವರು ಮೆಂಬರ್‌ಶಿಪ್‌ನಿಂದ ಪಡೆದಿಲ್ಲ. ಆ ದೃಷ್ಟಿಯಿಂದ ಯಾರು ಮೆಂಬರ್ ಇದ್ದಾರೆ ಅವರು ತೋಟಗಾರಿಕೆ ಮಾಡುವಂಥ ಜನರ ಸಲುವಾಗಿ ಇರಬೇಕು. ಅವರ ಉತ್ಪನ್ನಗಳನ್ನು ಖರೀದಿ ಮಾಡಬೇಕು. ಆ ದೃಷ್ಟಿಯಿಂದ ತಮ್ಮ ಪ್ರಯತ್ನ ಈ ಸೊಸೈಟಿಯಿಂದ ಆಗಿಲ್ಲ ಎಂದು ನಾನು ಹೇಳುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್ : ಸನ್ಮಾನ್ಯ ಅಧ್ಯಕ್ಷರೇ, ಇದುವರೆಗೂ ನಮ್ಮ ಕಡೆಯಂತೂ ಯಾರ ರೈತರೂ ನಮ್ಮನ್ನು ಮೆಂಬರ್ಸ್ ಮಾಡಿಕೊಂಡಿಲ್ಲ ಎಂದು ತಕರಾರು ಮಾಡಿಲ್ಲ. ಯಾವುದಾದರೂ ತಕರಾರು ಇದ್ದರೆ, ಅದನ್ನು ತಿಳಿಸಿದರೆ ಖಂಡಿತ ಅವರನ್ನೆಲ್ಲಾ ಮೆಂಬರ್ಸ್ ಮಾಡಿಸಿಕೊಳ್ಳುವ ವ್ಯವಸ್ಥೆ ಮಾಡುತ್ತೇನೆ. ಮತ್ತೆ ನಾವೂ ಕೂಡ ಮೆಂಬರ್‌ಶಿಪ್ ಡ್ರೈವ್ ತೆಗೆದುಕೊಂಡು ಎಲ್ಲಾ ಜಿಲ್ಲೆಗಳಲ್ಲಿ, ಆಯಾಯ ಏರಿಯಾದಲ್ಲಿ ಇರತಕ್ಕಂಥ ಎಲ್ಲಾ ತೋಟಗಾರಿಕಾ ಬೆಳಿಗಾರರನ್ನು ಮೆಂಬರ್‌ಗಳಾಗಿ ಮಾಡುವಂಥ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಜಿ. ಚಂದ್ರಕಾಂತ್ ಬೆಲ್ಲದ್ : ಕೋಲ್ಡ್ ಸ್ಟೋರೇಜ್ ಬಗ್ಗೆ ಏನು ಹೇಳುತ್ತೀರಿ?

ಅಧ್ಯಕ್ಷರು : ಅವರಾಗಲೇ ಹೇಳಿದರು.

ಅಂಗನವಾಡಿ ಕೇಂದ್ರಗಳಿಗೆ ರಜಾ ಸೌಲಭ್ಯ

361 - ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ) : ಮಾನ್ಯ ಮಹಿಳಾ ಹಾಗೂ ಮಕ್ಕಳ ಕಲ್ಯಾಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅಂಗನವಾಡಿ ಕೇಂದ್ರಗಳಿಗೆ ಬೇಸಿಗೆ ಹಾಗೂ ದಸರ ರಜೆ ಕೊಡುವ ಬಗ್ಗೆ ಸರ್ಕಾರದವರು ಪರಿಶೀಲಿಸಿರುವರೆ?

ಆ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?